<table>
<tr><td colspan="4">ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 1211/2023</td></tr>
<tr><td></td><td>ಸಿ.ಡಬ್ಲ್ಯೂ</td><td>2</td></tr>
<tr><td></td><td>ಪಿ.ಡಬ್ಲ್ಯೂ</td><td>3</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಮೊಹಮ್ಮದ್ ಅಲ್ತಾಫ್ ಹುಸ್ಸೇನ್ ಬಿನ್ ಮೊಹಮ್ಮದ್ ಹುಸ್ಸೇನ್</td></tr>
<tr><td>ವಯಸ್ಸು</td><td colspan="3">31 ವರ್ಷ</td></tr>
<tr><td>ಉದ್ಯೋಗ</td><td colspan="3">ಖಾಸಗಿ ಕೆಲಸ</td></tr>
<tr><td>ವಾಸಸ್ಥಳ</td><td colspan="3">ಬೆಂಗಳೂರು</td></tr>
</table>

**ದಿನಾಂಕಃ- 06.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ-1 ನನ್ನ ಸಂಬಂಧಿಕ. ಚಾಸಾ-3 ನನ್ನ ತಂದೆ. ಚಾಸಾ-4 ನನ್ನ ತಾಯಿ. ಚಾಸಾ-5 ರಿಂದ 11 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ದಿಃ- 18.12.2022 ರಂದು ಸಂಜೆ 07.30 ರ ಸಮಯದಲ್ಲಿ ನಾನು ಕೆಎ04.4146 ನೇದ್ದರ ಕಾರಿನಲ್ಲಿ ಚಾಸಾ-3 ಮತ್ತು 4 ರವರನ್ನು ಕೂರಿಸಿಕೊಂಡು ಮದ್ದೂರು ಕಡೆಯಿಂದ ಬೆಂಗಳೂರು ಕಡೆಗೆ ಚನ್ನಪಟ್ಟಣದ ಭೈರಾಪಟ್ಟಣ ಫ್ಲೆ ಓವರ್ ಮೇಲೆ ಹೋಗುವಾಗ ನಮ್ಮ ಹಿಂಬದಿಯಿಂದ ಒಂದು ಕಾರು ನೊಂದಣಿ ಸಂಖ್ಯೆ ಆರ್.ಜೆ. 8493 ನೇದ್ದರ ಕಾರು ಬಂದು ನಮ್ಮ ಕಾರನ್ನು ಓವರ್ ಟೇಕ್ ಮಾಡಿ ಮುಂದೆ ಡಿವೈಡರ್ ಗೆ ಹೊಡೆದು ಪಲ್ಟಿ ಆಗಿ ನಮ್ಮ ಕಾರಿನ ಮೇಲೆ ಬಂದು ಬಿದ್ದಿತು. ನನಗೆ, ಚಾಸಾ-3 ಮತ್ತು 4 ರವರಿಗೆ ಗಾಯಗಳು ಆಗಿದ್ದವು. ಅಪಘಾತ ಪಡಿಸಿದ ಕಾರಿನಲ್ಲಿ ಇದ್ದ ಮಹಿಳೆ ಮೃತಪಟ್ಟಿದ್ದರು. ಆ ಕಾರನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿ ನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1)	ಅಪಘಾತದಿಂದ ಸ್ಥಳದಲ್ಲಿ  ಸ್ಟೆನ್ನಿ ಜೋಸ್ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತವು ಈಗ ನ್ಯಾಯಾಲದ ಮುಂದಿರುವ ಆರೋಪಿತನ ತಪ್ಪಿನಿಂದಲೇ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ-</u> ಆರೋಪಿ ಪರ ಶ್ರೀ. ಎಂ.ಕೆ.ಎನ್.  ವಕೀಲರಿಂದ.**

1)	ಘಟನಾ ಸಮಯದಲ್ಲಿ ಕತ್ತಲೆ ಆವರಿಸಿತ್ತು ಎಂದರೆ ಸರಿ. ಬಿ.ಎಂ. ರಸ್ತೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಾನು ಏಕಾಏಕಿ ನನ್ನ ವಾಹನವನ್ನು ರಸ್ತೆಯಲ್ಲಿ ನಿಲ್ಲಿಸಿದ ಕಾರಣ ನನ್ನ ಹಿಂಬದಿಯಿಂದ ಬಂದಿದ್ದ ವಾಹನಗಳು ನಮಗೆ ಅಪಘಾತ ಪಡಿಸಿದ್ದವು ಎಂದರೆ ಸರಿಯಲ್ಲ. ನಾನು, ಚಾಸಾ- 3 ಮತ್ತು 4 ರವರು ಅಪಘಾತದಿಂದಾದ ನಷ್ಟಕ್ಕೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ನನ್ನ ಕಾರನ್ನು ರಾಜಸ್ಥಾನ ನೊಂದಣಿ ಸಂಖ್ಯೆಯ ಗಾಡಿ ಓವರ್ ಟೇಕ್ ಮಾಡಿ ಡಿವೈಡರ್ ಗೆ ಬಡಿದು ನಂತರ ನನ್ನ ವಾಹನದ ಮೇಲೆ ಬಿದ್ದಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)**

**ಓ.ಹೇ.ಕೆ.ಸರಿ ಇದೆ.**

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು**
**ಚನ್ನಪಟ್ಟಣ**